ಇ. ಶ್ರೀ ಟಿ.ಮರಿಯಪ್ಪನವರು ಒಬ್ಬ ಅಂಗವಿಕಲನಾಗಿರುವ ಕಾರಣ, ನಿವೇಶನ ಸಂಖ್ಯೆ 30 ರ ಮೇಲಿನ ಅವರ ವಾಸ್ತವ್ಯವನ್ನು ಮಾನವೀಯತೆ ದೃಷ್ಟಿಯಿಂದ ಚಾಲ್ತಿಯಲ್ಲಿರುವ ಹಂಚಿಕೆ ದರವನ್ನು ವಿಧಿಸಿ ಸಕ್ರಮಗೊಳಿಸಿರುವುದು ನಿಜ.

ಈ. ಈ ಮೇಲಿನ ನಿವೇಶನಗಳನ್ನು ಈಗಾಗಲೇ ಬೇರೆಯವರಿಗೆ ಹಂಚಿಕೆ ಮಾಡಿರುವ ಕಾರಣ. ಈ ನಿವೇಶನಗಳನ್ನು ಸಕ್ರಮಗೊಳಿಸುವ ಪ್ರಶ್ನೆಉದ್ಭವಿಸುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿತರಣೆ ಮಾಡಿದ ನಿವೇಶಗಳು

160(245) ಶ್ರೀ ಪಾಟೀಲ್ ಡಿ.ಆರ್ (ಗದಗ್) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪ್ರಸಕ್ತ ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿತರಣೆ ಮಾಡಿದ ನಿವೇಶನಗಳು ಎಷ್ಟು (ವರ್ಷವಾರು ವಿವರ ಒದಗಿಸುವುದು);

ಆ. ಈ ಹಿಂದಿನ ಸರ್ಕಾರ ಪೂರ್ಣ ಅವಧಿಯಲ್ಲಿ ಪ್ರಾಧಿಕಾರವು ವಿತರಣೆ ಮಾಡಿದ ನಿವೇಶನಗಳು ಎಷ್ಟು;

ಇ. ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಈವರೆಗೆ ವಿತರಣೆ ಮಾಡಿದ ನಿವೇಶನಗಳು ಎಷ್ಟು (ಬಡಾವಣೆವಾರು ವಿವರ ಒದಗಿಸುವುದು)?

ಶ್ರೀ ಎಸ್. ಎಂ. ಕೃಷ್ಣ (ಘೌನ್ಯ ಮುಖ್ಯಮಂತ್ರಿಗಳು)

ಅ. 30,000. (2000 ರಲ್ಲಿ 10,000, 2001 ರಲ್ಲಿ 15,000 ಮತ್ತು 2002 ರಲ್ಲಿ, 5,000 ನಿವೇಶನಗಳು).

ಆ. 1994 ರಲ್ಲಿ 21000 ನಿವೇಶನಗಳನ್ನು ಹಾಗೂ 1998 ರಲ್ಲಿ 13000 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಇ. 1976 ರಿಂದ ಇಲ್ಲಿಯವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 94,800 ನಿವೇಶನಗಳನ್ನು ಹಂಚಿಕೆ ಮಾಡಿರುತ್ತದೆ. ಬಡಾವಣೆವಾರು ವಿವರ ಸದ್ಯಕ್ಕೆ ಲಭ್ಯವಿರುವುದಿಲ್ಲ.

ರಾಜ್ಯದಲ್ಲಿನ ಗುತ್ತಿಗೆದಾರರಿಗೆ ಪಾವತಿಸಬೇಕಾಗಿರುವ ಬಾಕಿ

161(157) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಲೋಕೋಪಯೋಗಿ ನೀರಾವರಿ, ಹಾಗೂ ಸಣ್ಣ ನೀರಾವರಿ ಇಲಾಖೆಗಳ ಗುತ್ತಿಗೆದಾರರಿಗೆ ಸರ್ಕಾರ ಕೊಡಬೇಕಾದ ಬಾಕಿ ಹಣವೆಷ್ಟು ಎಷ್ಟು ವರ್ಷಗಳಿಂದ ಬಾಕಿ ಇದೆ. ವಿವರ ನೀಡುವುದು.

ಆ. ಬಾಕಿ ಉಳಿಯಲು ಕಾರಣಗಳೇನು.

ಇ. ಕೊಡಲೇ ಬಾಕಿ ಹಣವನ್ನು ಪಾವತಿಸಲು ಸರ್ಕಾರ ಕೈಗೊಂಡ ಕ್ರಮವೇನು?